

ನಿರೀಕ್ಷಿತ, 23 ಹಾಲಿ) ಸರಿಸುಮಾರು ನಿರೀಕ್ಷೆಯಷ್ಟೇ ಸಾಹಿತ್ಯದಲ್ಲಿ ತೊಡಗಿಕೊಳ್ಳುತ್ತಾರೆ (ಕ್ರಮವಾಗಿ 1:0.96 ಮತ್ತು 1:0.82).

4. ಒಟ್ಟಿನಲ್ಲಿ ವಾಣಿಜ್ಯ (1:0.45) ಮತ್ತು ಬಿ.ಎ. (1: 1.96) ಪದವೀಧರರಿಗಿಂತ ವಿಜ್ಞಾನ ಮತ್ತು ತಂತ್ರಜ್ಞಾನದ ಪದವೀಧರರು (1:1.25) ಸಾಹಿತ್ಯದಲ್ಲಿ ಹೆಚ್ಚು ತೊಡಗಿಕೊಂಡಿದ್ದಾರೆ (ಪಟ್ಟಿ–2) ಎನ್ನುವುದು ಸ್ಪಷ್ಟವಾಗಿ ಎದ್ದು ಕಾಣುವ ಒಂದು ಅನಿರೀಕ್ಷಿತ ಸಾಧ್ಯತೆ. ಅನಿರೀಕ್ಷಿತ ಏಕೆಂದರೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪರಿಣತಿ ಪಡೆದವರು ಸಾಹಿತ್ಯಕ್ಕೆ ದೂರ ಮತ್ತು ಕಲೆ, ಸುದ್ದಿ ಮಾಧ್ಯಮ, ಚರಿತ್ರೆ, ಸಮಾಜಶಾಸ್ತ್ರ ಮುಂತಾದ ವಿಷಯಗಳ ಪದವೀಧರರು ಸಾಹಿತ್ಯದಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಹೆಚ್ಚು ಎನ್ನುವುದು ಸಾಮಾನ್ಯವಾಗಿರುವ ನಂಬಿಕೆ. ಆದರೆ ಇದಕ್ಕೆ ತದ್ವಿರುದ್ಧವಾಗಿ, 21ನೇ ಶತಮಾನದ ಮೊದಲ ಎರಡು ದಶಕಗಳಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ತಂತ್ರಜ್ಞಾನದ ಪದವೀಧರರು ನಿರೀಕ್ಷೆಗೂ ಮೀರಿ ಸಾಹಿತ್ಯದಲ್ಲೂ ತೊಡಗಿಕೊಂಡಿರುವುದು ವಿಶೇಷ. ಇದಕ್ಕೆ ಹಲವಾರು ಕಾರಣಗಳಿರಲು ಸಾಧ್ಯ. ಅಂತಹ ಕೆಲವು ಕಾರಣಗಳನ್ನು ಪರಿಶೀಲಿಸೋಣ.

## ಸ್ಪರ್ಧಾತ್ಮಕ ಆಯ್ಕೆ ಮತ್ತು ಸೃಜನಶೀಲತೆ

ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳು ಕೇವಲ ಅವರ ನೆನಪಿನ ಶಕ್ತಿಯನ್ನು ಮತ್ತು ಕಂಠಪಾಠ ಮಾಡಿ ಗಿಳಿಯಂತೆ ಒಪ್ಪಿಸುವ ಗಣಕರೂಪದ ಶಕ್ತಿಯನ್ನು ಸೂಚಿಸುತ್ತವೆಯೇ ಹೊರತು, ಅವರ ನಿಜವಾದ ಬೌದ್ಧಿಕ ಮಟ್ಟವನ್ನಾಗಲೀ, ಅವರ ಚಿಂತನಾಶಕ್ತಿಯನ್ನಾಗಲೀ, ಕ್ರಿಯಾಶೀಲತೆ ಮತ್ತು ಸೃಜನಶೀಲತೆಯನ್ನಾಗಲೀ ಸೂಚಿಸುವುದಿಲ್ಲ ಎನ್ನುವುದು ಸಾಮಾನ್ಯವಾಗಿ ಕಂಡುಬರುವ ಒಂದು ವಾದ. ಹಾಗೆಯೇ, CET, NEET ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳೂ ವಿದ್ಯಾರ್ಥಿಗಳ ಬುದ್ಧಿಮತ್ತೆ ಮತ್ತು ಸೃಜನಶೀಲತೆಯನ್ನು ಅಳೆಯಲಾರವು ಎನ್ನುವುದು ಪ್ರಚಲಿತದಲ್ಲಿರುವ ವಿವಾದಾತ್ಮಕ ನಂಬಿಕೆ. ಅದು ನಿಜವಾಗಿದ್ದಲ್ಲಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ರ್‍ಯಾಂಕ್ ಗಳಿಸಿ, ವೈದ್ಯಕೀಯ ಮತ್ತು ಬಿ.ಇ. ಪದವಿಗಳಿಗೆ ಹೋಗುವ ವಿದ್ಯಾರ್ಥಿಗಳು, ಸೃಜನಶೀಲತೆಯನ್ನು ಆಧರಿಸುವ ಸಾಹಿತ್ಯ ಕೃಷಿಯಲ್ಲಿ ಕಲಾವಿಭಾಗದ ವಿದ್ಯಾರ್ಥಿಗಳಿಗಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿರಲು ಸಾಧ್ಯವಿಲ್ಲ. ಆದರೆ ಮಾಹಿತಿಯ ಅವಲೋಕನವು ಇದಕ್ಕೆ ವಿರುದ್ಧವಾದ ಸಹ ಸಂಬಂಧವನ್ನು ಸೂಚಿಸುತ್ತಿದೆ. ಪರೀಕ್ಷೆಗಳಲ್ಲಿ ಗಳಿಸುವ ಅಂಕಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಡೆಯುವ ರ್‍ಯಾಂಕ್‌ಗಳು ವಿದ್ಯಾರ್ಥಿಗಳ ಸೃಜನಶೀಲತೆಯನ್ನೂ ಸೂಚಿಸುತ್ತವೆ ಎಂದು ತಿಳಿದುಬರುತ್ತದೆ.

## ವೃತ್ತಿಯ ಆರ್ಥಿಕತೆ ಮತ್ತು ಸಾಹಿತ್ಯ ಕೃಷಿ

ವೈದ್ಯಕೀಯ ಮತ್ತು ಬಿ.ಇ. ಪದವಿ ಪಡೆದವರ ಆರ್ಥಿಕ ಸ್ಥಿತಿ ಉಳಿದವರಿಗಿಂತ ಭಿನ್ನವಾಗಿದ್ದು, ಸಾಮಾನ್ಯವಾಗಿ ಅವರ ಗಳಿಕೆ ಉಳಿದ ಪದವೀಧರರಿಗಿಂತ ಹೆಚ್ಚಾಗಿರುತ್ತದೆ ಎನ್ನಬಹುದು. ಹಾಗೆ ಹೆಚ್ಚಿದ ಆರ್ಥಿಕ ಸ್ಥಿತಿಯಿಂದಾಗಿ, ಇತರರನ್ನು ಕಾಡುವ ಬದುಕಿನ ದೈನಂದಿನ ಆತಂಕಗಳಿಂದ ಅವರು ಕೊಂಚವಾದರೂ ಬಿಡುಗಡೆ ಹೊಂದಿರುವ ಸಾಧ್ಯತೆ ಇದ್ದು, ಆ ನಿರಾಳ ಭಾವದಿಂದಾಗಿ ಅವರು ಸಾಹಿತ್ಯದಲ್ಲಿ ಹೆಚ್ಚು ತೊಡಗಿಸಿಕೊಂಡಿರಬಹುದೇ ಎಂಬ ಪ್ರಶ್ನೆ ಮೂಡುತ್ತದೆ. ಜೊತೆಗೆ, ಬಿ.ಇ. ಮತ್ತು ವೈದ್ಯಕೀಯ ವೃತ್ತಿಯವರು ಆರ್ಥಿಕವಾಗಿ ಇತರರಿಗಿಂತ ಮುನ್ನೆಲೆಯಲ್ಲಿದ್ದರೂ, ಅವರು ಎದುರಿಸುವ ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಮನಸ್ಸಿಗೆ ನೆಮ್ಮದಿ ಮತ್ತು ಶಾಂತಿ ಒದಗಿಸುವ ಹಾದಿಗಳನ್ನು ಹುಡುಕಲು, ಹಾಗೂ ಅಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕೆನ್ನುವ ಇರಾದೆಯು ಅವರಲ್ಲಿ ಹೆಚ್ಚು ಕಾಣುತ್ತದೆ. ಈ ಕಾರಣದಿಂದಾಗಿ ಅವರು ಮೆಡಿಟೇಶನ್, ಇನ್ನರ್ ಎಂಜಿನಿಯರಿಂಗ್, ಯೋಗ, ಚಾರಣ, ಪ್ರಯಾಣ, ಆಧ್ಯಾತ್ಮಿಕ ಮತ್ತು ಸಾಹಿತ್ಯ ಕೃಷಿಯಂತಹ ಕಾರ್ಯಕ್ಷೇತ್ರಗಳಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡಿರಲೂ ಸಾಧ್ಯ.

## ವೃತ್ತಿ-ಸಾಂಗತ್ಯ ಪ್ರೇರಣೆ

ಮೇಲಿನ ಕಾರಣಗಳ ಜೊತೆಗೆ ಸಹವಾಸ ಪ್ರೇರಣೆಯೂ ಇಲ್ಲಿ ಕಾಣುವ ಪ್ರಕಾರಕ್ಕೆ ಕಾರಣವಿರಲು ಸಾಧ್ಯ. ಸ್ವಯಂ ಸಂರಚನೆ ಅಥವಾ Self–organised pattern ಎಂದು ಕರೆಯಲಾಗುವ ಈ ಕ್ರಿಯೆಯನ್ನು ಈ ಸಂಬಂಧದಲ್ಲಿ 'ಸಹವಾಸ ದೋಷ' ಎಂದೂ ವಿವರಿಸಿದರೆ ತಪ್ಪಾಗಲಾರದು. ಇದರ ಕ್ರಿಯಾಕ್ರಮ ಸರಳ: ಯಾವುದೋ ಕಾರಣದಿಂದ (ಉದಾಹರಣೆಗೆ ಮೇಲೆ ಉಲ್ಲೇಖಿಸಿರುವ ಎರಡು ಕಾರಣಗಳಿಂದ), ಬಿ.ಇ. ಮತ್ತು ವೈದ್ಯಕೀಯ ವೃತ್ತಿಯ ಕೆಲವರು ಸಾಹಿತ್ಯದಲ್ಲಿ ತೊಡಗಿಸಿಕೊಂಡರೆ, ಅವರ ಸಂಪರ್ಕಕ್ಕೆ ಬರುವ, ಅದೇ ವೃತ್ತಿಯ ಇತರರಲ್ಲೂ ಅದರ ಬಗ್ಗೆ ಪ್ರೇರಣೆ ಮೂಡಿ ಅವರಿಂದಲೂ ಪ್ರಯತ್ನಗಳು ನಡೆಯುವ ಸಾಧ್ಯತೆಗಳಿವೆ.

ಹೀಗೆ ಹಲವು ಕಾರಣಗಳಿಂದ ಬಿ.ಇ. ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಸಾಹಿತ್ಯದಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಹೆಚ್ಚು ಇದ್ದು, ಅದರಿಂದಾಗಿ ನಾವು ಕಾಣುವ ವೃತ್ತಿ ಆಧಾರಿತ ಪ್ರಕಾರ ಪರಿಣಮಿಸಿರಬಹುದು ಕೂಡ. ಏನೇ ಆದರೂ ಸಾಹಿತ್ಯ ಕೃಷಿಯು ಹೀಗೆ ಕೆಲವೇ ಶಾಖೆಗಳ ಅಥವಾ ವೃತ್ತಿಗಳ ಬರಹಗಾರರಲ್ಲಿ ಕೇಂದ್ರೀಕೃತವಾಗುವುದರ ಪರಿಣಾಮವಾಗಿ ಅದರ ವೈವಿಧ್ಯಕ್ಕೆ ಕುಂದು ಬರುವ ಸಾಧ್ಯತೆ ಇದೆ ಎನ್ನುವುದನ್ನು ಮನಗಾಣಬೇಕು. ಬಿ.ಎ. ಪದವೀಧರರು ಈ ಬಗ್ಗೆ ಅವಲೋಕನ ಮಾಡುವ ಅವಶ್ಯಕತೆ ಇದೆ.

**ಪಟ್ಟಿ 2. ವಿವಿಧ ವಿಭಾಗಗಳಿಂದ ನಿರೀಕ್ಷಿತ ಮತ್ತು ಹಾಲಿ ಇರುವ ಬರಹಗಾರರ ಸಂಖ್ಯೆ**

| ವಿಭಾಗ | ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡವರ ಸಂಖ್ಯೆ | ನಿರೀಕ್ಷಿತ ಸಂಖ್ಯೆ | ಪ್ರತಿ ಒಬ್ಬ ನಿರೀಕ್ಷಿತರಿಗೆ ಹಾಲಿ ಕಾಣುವ ಸಾಹಿತಿಗಳು |
|---|---|---|---|
| ಕಲೆ (BA) | 50 | 52 | 1: 0.96 |
| ವಾಣಿಜ್ಯ (B.Com) | 9 | 20 | 1: 0.45 |
| ವಿಜ್ಞಾನ & ತಂತ್ರಜ್ಞಾನ | 64 | 51 | 1: 1.25 |

ಪ್ರತಿಕ್ರಿಯಿಸಿ: feedback@sudha.co.in